ದಿನಾಂಕ: 19.11.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀಸವಾಲು: ಶ್ರೀ.ಜೆಎಸ್ ವಕೀಲರಿಂದ ಎದುರುದಾರರ ಪರವಾಗಿ.

ನಮಗೆ ಇಬ್ಬರು ಮಕ್ಕಳು ಆಗಿರುತ್ತಾರೆ. ಮಗ ನಮ್ಮ ಜೊತೆ ವಾಸವಾಗಿರುತ್ತಾರೆ. ನನ್ನ ಮಗ ಕೆಲಸಕ್ಕೆ ಹೋಗುತ್ತಿದ್ದಾನೆ ಎಂದರೆ ಸರಿ. ಅಪಪಘಾತದ ಕುರಿತಂತೆ ದೂರನ್ನು ನನ್ನ ಯಜಮಾನರು ಕೊಟ್ಟಿರುತ್ತಾರೆ. ಅಪಘಾತವನ್ನು ನಾನು ಮತ್ತು ನಮ್ಮ ಯಜಮಾನರು ನೋಡಿರುವುದಿಲ್ಲ. ಅಪಘಾತವಾಗಿದ್ದ ಸ್ಥಳವನ್ನು ನಾವು ನೋಡಿರುತ್ತೇವೆ. ಆ ಸ್ಥಳದ ಎಮ್‌ವಿಜೆ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ನನ್ನ ಮಗಳು ದ್ವಿಚಕ್ರ ವಾಹನದ ಮೇಲೆ ಬರುತ್ತಿದ್ದಳು. ಆ ವಾಹನವನ್ನು ಶಶಿಕುಮಾರ್ ಎನ್ನುವವರು ಚಲಾಯಿಸುತ್ತಿದ್ದರು. ಆ ದಿನ ನನ್ನ ಮಗಳು ಮದುವೆಗೆ ಹೋಗುತ್ತಿದ್ದಳು. ನನ್ನ ಮಗಳು ಸವಾರಿ ಮಾಡುತ್ತಿದ್ದ ದ್ವಿಚಕ್ರ ವಾಹನದ ಸವಾರನ ತಪ್ಪಿನಿಂದ ಆತನೇ ಹೋಗಿ ನಿಂತಿದ್ದ ಲಾರಿಗೆ ಡಿಕ್ಕಿಹೊಡೆಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗಳು ಸವಾರಿ ಮಾಡುತ್ತಿದ್ದ ದ್ವಿಚಕ್ರ ವಾಹನದ ಸವಾರನಿಗೆ ಚಾಲನಾ ಪರವಾನಿಗೆ ಇತ್ತು ಎನ್ನುವ ಕುರಿತಂತೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಮಗಳು ದ್ವಿತೀಯ ಪಿಯುಸಿಯವರಗೆ ಓದಿರುತ್ತಾಳೆ. ನನ್ನ ಮಗಳು ಪಿಯುಸಿ ಮುಗಿಸಿದ ನಂತರ ಏನು ಕೆಲಸ ಮಾಡದೇ ಮನೆಯಲ್ಲಿ ಇದ್ದಳು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗಳು ಟೈಲರಿಂಗ್ ಕೆಲಸ ಮಾಡುತ್ತಿದ್ದಳು ಮತ್ತು ದಿನಕ್ಕೆ ರೂ.1,000-00 ಆದಾಯ ಗಳಿಸುತ್ತಿದ್ದಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾವು ಆಸ್ಪತ್ರೆಗೆ ಒಂದು ಲಕ್ಷ ಖರ್ಚು ಮಾಡಿರುತ್ತೇವೆ ಎಂದು ಸುಳ್ಳು ಹೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಶಶಿಕುಮಾರ್ ಇವರ ತಪ್ಪಿನಿಂದ ಆಗಿದ್ದು ಅಪಘಾತದ ಸಮಯದಲ್ಲಿ ನನ್ನ ಮಗಳು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲು: ಶ್ರೀ. ವಿಆರ್‌ಬಿ ವಕೀಲರಿಂದ ಮೂರನೇ ಎದುರುದಾರರ ಪರವಾಗಿ.

ಗೈರುಹಾಜರಾಗಿದ್ದು ಪ್ರತಿವಾದಪತ್ರವನ್ನು ಸಲ್ಲಿಸದೇ ಇರುವುದರಿಂದ ಏನು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ